ಗೃಹ ರಕ್ಷಕರಿಗೆ ಟೆರಿಕಾಟ್ ಸಮವಸ್ತ್ರ

302- ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಗೃಹ ರಕ್ಷಕರುಗಳ ಒಟ್ಟು ಸಂಖ್ಯೆ ಎಷ್ಟು?*

ಆ) *ಇವರಿಗೆ ಎಷ್ಟು ವರ್ಷಕ್ಕೊಮ್ಮೆ ಸಮವಸ್ತ್ರವನ್ನು ನೀಡಲಾಗುವುದು?*

ಇ) *ಇವರಿಗೆ ಪೋಲಿಸರಿಗಿರುವಂತೆ ಟೆರಿಕಾಟ್ ಸಮವಸ್ತ್ರಗಳನ್ನು ವಿತರಿಸುವ ಯೋಜನೆ ಸರ್ಕಾರದ ಮುಂದಿದೆಯೇ? ಇದ್ದಲ್ಲಿ ಯಾವಾಗ ನೀಡಲಾಗುವುದು?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) 19,938.

ಆ) ನಿಯಾಮಾನುಸಾರ ಪ್ರತಿ ವರ್ಷಕ್ಕೆ ಪ್ರತಿಯೊಬ್ಬನಿಗೆ ಒಂದು ಜೊತೆ ಹತ್ತಿ ಬಟ್ಟೆಯ ಸಮವಸ್ತ್ರವನ್ನು ಮತ್ತು ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಒಂದು ಜೊತೆ ಟೆರಿಕಾಟ್ ಸಮವಸ್ತ್ರವನ್ನು ಹತ್ತಿ ಬಟ್ಟೆಯ ಸಮವಸ್ತ್ರಕ್ಕೆ ಬದಲಿಗೆ ನೀಡಲು ಅವಕಾಶವಿದೆ.

ಇ) ಟೆರಿಕಾಟ್ ಸಮವಸ್ತ್ರಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದ್ದು ಹಣಕಾಸಿನ ಲಭ್ಯತೆಯನ್ನು ಆಧರಿಸಿ ಇದೇ ವರ್ಷ ಪೂರೈಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ತಾಲ್ಲೂಕುವಾರು ಗೃಹರಕ್ಷಕರಿಗೆ ಕಛೇರಿ ಕಟ್ಟಡ

303 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತಾಲ್ಲೂಕು ಕೇಂದ್ರದಲ್ಲಿ ಗೃಹ ರಕ್ಷಕರ ಸ್ವಂತ ಕಛೇರಿ ಕಟ್ಟಡ ಇದೆಯೇ? ಪ್ರತಿ ತಾಲ್ಲೂಕಿನಲ್ಲಿ ಗೃಹ ರಕ್ಷಕ ಕಛೇರಿ ಕಟ್ಟಡಗಳನ್ನು ಸ್ಥಾಪಿಸುವ ಯೋಜನೆ ಸರ್ಕಾರಕ್ಕಿದೆಯೇ?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು):

ಅ) ಇಲ್ಲ.

ಆ) ಇಲ್ಲ.

ತುಂಗಾ ಮೇಲ್ದಂಡೆ ಯೋಜನೆಗೆ ಖರ್ಚಾದ ಹಣ

304 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತಂಗಾ ಮೇಲ್ದಂಡೆ ಯೋಜನೆಗೆ ಇದುವರೆವಿಗೂ ಎಷ್ಟು ಹಣ ವೆಚ್ಚ ಮಾಡಲಾಗಿದೆ, ಹಾಗೂ ಅದನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಹಣ ವೆಚ್ಚ ಮಾಡಬೇಕಾಗುವುದು.*

ಅ) ಇದು ಯಾವಾಗ ಪೂರ್ಣಗೊಳ್ಳುತ್ತದೆ.

ಇ) ಯೋಜನೆಯಿಂದ ಮುಳುಗಡೆಯಾಗುವ ಅರಣ್ಯ ಭೂಮಿ ಎಷ್ಟು ? ಮತ್ತು ಮನೆಗಳೆಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಜನವರಿ 96ರ ಅಂತ್ಯದವರೆಗೆ 7.44 ಕೋಟಿಗಳು ವೆಚ್ಚವಾಗಿರುವುದು. ಈ ಯೋಜನೆಯನ್ನು ಪೂರ್ಣಗೊಳಿಸಲು ಸುಮಾರು ರೂ.372 ಕೋಟಿಗಳು ಬೇಕಾಗುತ್ತದೆ.

ಆ) ಈ ಯೋಜನೆಯನ್ನು 2000ನೇ ಇಸವಿಯೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇ) ಈಗ ಹಾಲಿ ಇರುವ ತುಂಗಾ ಅಣೆಕಟ್ಟಿಯಡಿಯಲ್ಲಿ ಮುಳುಗಡೆಯಾಗಿರುವ ಈ ಪ್ರದೇಶಕ್ಕಿಂತ ಈ ಯೋಜನೆಯಿಂದ ಯಾವುದೇ ಹೆಚ್ಚಿನ ಅರಣ್ಯ ಭೂಮಿ ಅಥವಾ ಮನೆಗಳು ಮುಳುಗಡೆ ಆಗುವುದಿಲ್ಲ.

ತೀರ್ಥಹಳ್ಳಿ ತಾಲ್ಲೂಕಿಗೆ ಏತ ನೀರಾವರಿ ಯೋಜನೆ.

305 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತೀರ್ಥಹಳ್ಳಿ ತಾಲ್ಲೂಕಿಗೆ 1995-96ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ಆಪೆಂಡಿಕ್ಸ್ 'ಇ'ಯಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳು ಮಂಜೂರಾಗಿವೆ, ಮತ್ತು ಯಾವ ಸ್ಥಳಕ್ಕೆ ಮಂಜೂರಾಗಿವೆ.

ಆ) ಈ ಕಾಮಗಾರಿಗಳನ್ನು ಇದುವರೆವಿಗೂ ಪ್ರಾರಂಭಿಸದಿರಲು ಕಾರಣಗಳೇನು ? ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಮಂತ್ರಿ) :

ಅ) 3 ಏತ ನೀರಾವರಿ ಯೋಜನೆ ಸೇರಿದೆ. ಇವುಗಳ ಸ್ಥಳಗಳು ಕೆಳಕಂಡಂತೆ ಇರುತ್ತದೆ.

1) ಹೊಸಹಳ್ಳಿ 2) ಬಾಳೇಬಯಲು 3) ಮಿನಗುಂದ.

ಆ) ಈ ಏತ ನೀರಾವರಿ ಯೋಜನೆಗಳ ಪೂರ್ವಭಾವಿ ತನಿಖಾ ವರದಿಯು ತಯಾರಿಕೆ ಹಂತದಲ್ಲಿರುತ್ತದೆ. ಈ ಯೋಜನೆಗಳ ತಾಂತ್ರಿಕ ಹಾಗೂ ಆರ್ಥಿಕ ಶಕ್ಯತೆಯನ್ನು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ವಿಜಾಪುರ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ.

306- ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?